ಹೊನ್ನಾಳಿ ತಾಲ್ಲೂಕಿನಲ್ಲಿ ತೀರ್ಥರಾಮೇಶ್ವರದಲ್ಲಿ ನಿರ್ಮಿಸಲಾಗಿರುವ ಯುವಜನ ವಸತಿ ನಿಲಯ ಕಟ್ಟಡ.

589(898)

ಶ್ರೀ ನಾರಾಯಣ ಸ್ವಾಮಿ ಎ.(ಆನೇಕಲ್): ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ತೀರ್ಥ ರಾಮೇಶ್ವರದಲ್ಲಿ ರೂ.77.06 ಲಕ್ಷಗಳ ಅಂದಾಜಿನಲ್ಲಿ ನಿರ್ಮಿಸಲಾಗಿರುವ ಯುವಜನ ವಸತಿ ನಿಲಯ ಕಟ್ಟಡವನ್ನು ಕೇಂದ್ರ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಇಲಾಖೆಯ ಮ್ಯಾನ್ಯುಯಲ್ಲಿನಲ್ಲಿ ತಿಳಿಸಿರುವಂತೆ ಬಳಕೆಯಾಗುತ್ತಿದೆಯೇ?

2. ಈ ಯುವಜನ ವಸತಿ ನಿಲಯವನ್ನು ಏಪ್ರಿಲ್ 95ರಲ್ಲಿ ಪೂರ್ತಿಗೊಳಿಸಿ ಯುವಜನ ವಸತಿನಿಲಯ ನಿರ್ವಾಹಣಾ ಸಮಿತಿಗೆ ವರ್ಗಾಯಿಸಿರುವುದು ನಿಜವೇ?

3. ಎರಡು ವರ್ಷ ಕಳೆದರೂ ಮೂಲ ಸೌಕರ್ಯ ಅಂದರೆ ನೀರು, ವಿದ್ಯುತ್ ಇತ್ಯಾದಿಗಳನ್ನು ಒದಗಿಸಲು ಕ್ರಮ ಕೈಗೊಂಡಿರುವುದಿಲ್ಲ ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

4. ಈ ಕಟ್ಟಡವನ್ನು ನಿರ್ಮಾಣ ಮಾಡಲು ದೂರದ ಸ್ಥಳವನ್ನು ಜಿಲ್ಲಾಧಿಕಾರಿಗಳು ಆಯ್ಕೆ ಮಾಡಿರುವುದು ಸರಿಯಾದ ಕ್ರಮವೇ?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

1. ಹೊನ್ನಾಳಿ ತಾಲ್ಲೂಕಿನ ತೀರ್ಥರಾಮೇಶ್ವರದಲ್ಲಿ ನಿರ್ಮಿಸಲಾದ ಯುವಜನ ವಸತಿ ನಿಲಯವನ್ನು ಆಗಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್.ಪಾಟೀಲ್‌ರವರು ದಿನಾಂಕ 17-5-99ರಂದು ಉದ್ಘಾಟಿಸಿದ್ದಾರೆ. ಯುವಜನ ವಸತಿ ನಿಲಯವನ್ನು ಶಿವಮೊಗ್ಗ ಜಿಲ್ಲೆಯಿಂದ ಹೊಸ ಜಿಲ್ಲೆಯಾದ ದಾವಣಗೆರೆ ಜಿಲ್ಲೆಗೆ ಹಸ್ತಾಂತರಿಸಲಾಗಿದೆ. ಯುವಜನ ವಸತಿ ನಿಲಯಕ್ಕೆ ಅವಶ್ಯಕವಾದ ಸಾಮಗ್ರಿಗಳನ್ನು ಈಗಾಗಲೇ ಖರೀದಿಸಲಾಗಿದೆ. ಯುವಜನ ವಸತಿ ನಿಲಯವನ್ನು ಈಗಾಗಲೇ ಬಳಕೆ ಮಾಡಲಾಗುತ್ತಿದ್ದು ಈ ಇಲಾಖೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಯುವಜನ ವಸತಿ ನಿಲಯದಲ್ಲಿ ಏರ್ಪಡಿಸಲಾಗಿದೆ.

ಅ. ಎರಡು ಶಿಬಿರಗಳನ್ನು ಒಂದು ಸ್ಕೌಟ್ಸ್ ಮತ್ತು ಗೈಡ್ಸ್ ಉಪನ್ಯಾಸಕರಿಗೆ

(100) ಮತ್ತು ಇನ್ನೊಂದು ತರಬೇತಿ ಶಿಬಿರವನ್ನು ಶಿವಮೊಗ್ಗ ಜಿಲ್ಲೆಯ ಯುವ ಸೇನಾ ಘಟಕಗಳ 68 ಸಂಚಾಲಕರಿಗೆ ಏರ್ಪಡಿಸಲಾಗಿದೆ. 60 ಜನ ಯುವ ಮಹಾಮಂಡಲಗಳ ಪ್ರತಿನಿಧಿಗಳಿಗೆ ಕಾರ್ಯಾಗಾರವನ್ನು ದಿನಾಂಕ 15-5-2000 ದಿಂದ 22-5-2000ದವರೆಗೆ ಏರ್ಪಡಿಸಲಾಗಿದೆ.

ಆ. ಕಳೆದ ಒಂದು ವರ್ಷದಲ್ಲಿ ಅಂದರೆ ದಾವಣಗೆರೆ ಜಿಲ್ಲೆಗೆ ವರ್ಗಾವಣೆಯಾದ ನಂತರ ಈ ಇಲಾಖೆಯಿಂದ ಒಂದು ತರಬೇತಿ ಕಾರ್ಯಕ್ರಮವನ್ನು ಹಾಗೂ ಎರಡು ಬರಹಗಾರರ ಕಾರ್ಯಾಗಾರಗಳನ್ನು ಜಿಲ್ಲಾ ಆಡಳಿತದವರು ಹಮ್ಮಿಕೊಂಡಿರುತ್ತಾರೆ.

2. ಯುವಜನ ವಸತಿ ನಿಲಯವನ್ನು ಏಪ್ರಿಲ್ 95ರಲ್ಲಿ ಪೂರ್ಣಗೊಳಿಸಿದ್ದರೂ ಸಹ ಕೇಂದ್ರ ಲೋಕೋಪಯೋಗಿ ಇಲಾಖೆಯವರು ಕೇಂದ್ರ ಸರ್ಕಾರದಿಂದ ಸುಮಾರು 40 ಲಕ್ಷಗಳು ಬಾಕಿ ಹಣ ಬಿಡುಗಡೆಯಾಗುವವರೆಗೂ ಇಲಾಖೆಗೆ ಹಸ್ತಾಂತರಿಸಲು ನಿರಾಕರಿಸಿದ್ದು, ಕೇಂದ್ರ ಸರ್ಕಾರದಿಂದ ಬಾಕಿ ಹಣ ಬಿಡುಗಡೆಯಾದ ನಂತರ ಕಾರ್ಯಪಾಲಕ ಅಭಿಯಂತರರು ಕೇಂದ್ರ ಲೋಕೋಪಯೋಗಿ ಇಲಾಖೆಯವರು ತಮ್ಮ ದಿನಾಂಕ 9-9-96ರ ಪತ್ರದಲ್ಲಿ ಯುವಜನ ವಸತಿ ನಿಲಯದ ಕಟ್ಟಡವು ಎಲ್ಲಾ ರೀತಿಯಲ್ಲಿ ಪೂರ್ಣಗೊಂಡಿರುವುದರಿಂದ ಈ ಇಲಾಖೆಗೆ ಹಸ್ತಾಂತರಿಸಿಕೊಳ್ಳಬೇಕೆಂದು ತಿಳಿಸಿದ್ದರ ಮೇರೆಗೆ ಎಲ್ಲಾ ನಿಯಮಗಳನ್ನು ಪರಿಶೀಲಿಸಿದ ನಂತರ ದಿನಾಂಕ 24-2-97ರಲ್ಲಿ ಸದರಿ ಯುವಜನ ವಸತಿ ನಿಲಯವನ್ನು ಈ ಇಲಾಖೆಯ ವಶಕ್ಕೆ ಹಸ್ತಾಂತರಿಸಿಕೊಳ್ಳಲಾಗಿದೆ.

3. ಯುವಜನ ವಸತಿ ನಿಲಯದ ಕಟ್ಟಡವನ್ನು ಯಾವುದೇ ಮೂಲ ಸೌಲಭ್ಯಗಳಿಲ್ಲದೆ ಕೇಂದ್ರ ಲೋಕೋಪಯೋಗಿ ಇಲಾಖೆಯವರು ಈ ಇಲಾಖೆಗೆ ಹಸ್ತಾಂತರಿಸಿರುತ್ತಾರೆ, ವಿದ್ಯುಚ್ಛಕ್ತಿಯನ್ನು ಈಗಾಗಲೇ ವಸತಿ ನಿಲಯಕ್ಕೆ ಅಳವಡಿಸಲಾಗಿದೆ. ಪ್ರಸ್ತುತ ನೀರಿನ ಸರಬರಾಜನ್ನು ತೀರ್ಥರಾಮೇಶ್ವರ ಟ್ರಸ್ಟ್‌ರವರಿಂದ ಪಡೆಯಲಾಗುತ್ತಿದೆ. ಜಿಲ್ಲಾಧಿಕಾರಿಗಳು ಹಾಗೂ ಯುವಜನ ವಸತಿ ನಿಲಯದ ನಿರ್ವಹಣಾ ಸಮಿತಿ ಅಧ್ಯಕ್ಷರು ಜಿಲ್ಲಾ ಆಡಳಿತಕ್ಕೆ ಒದಗಿಸಿರುವ ಅನುದಾನದಲ್ಲಿ ಯುವಜನ ವಸತಿ ನಿಲಯಕ್ಕೆ ನೀರಿನ ವ್ಯವಸ್ಥೆ ಮಾಡಲಾಗುತ್ತದೆ ಎಂದು ಭರವಸೆ ನೀಡಿರುತ್ತಾರೆ. ಜಿಲ್ಲಾಧಿಕಾರಿಗಳು ಹಣ ಬಿಡುಗಡೆ ಮಾಡಿದ ನಂತರ ತೀರ್ಥರಾಮೇಶ್ವರ ಯುವಜನ ವಸತಿ ನಿಲಯ ಕಾಂಪೌಂಡ್‌ನಲ್ಲಿಯೇ ಬೋರ್‌ವೆಲ್‌ನ್ನು ತೆಗೆಯಲು ಕ್ರಮ ಕೈಗೊಳ್ಳಲಾಗುತ್ತದೆ. ಪ್ರಸ್ತುತ ನೀರಿನ ಕೊರತೆ ಇರುವುದಿಲ್ಲ.

4. ಹಿಂದಿನ ಶಾಸಕರಾದ ಶ್ರೀ ಬಸವನಗೌಡ ಇವರು ಹಿಂದಿನ ಯುವಜನ ಸೇವಾ ಮತ್ತು ಕ್ರೀಡಾ ಸಚಿವರಾದ ಶ್ರೀ ಬಿ.ಎಲ್.ಶಂಕರ್ ಇವರಿಗೆ ಪ್ರಸ್ತಾವನೆ ಸಲ್ಲಿಸಿದ ಮೇರೆಗೆ ಮಾನ್ಯ ಕ್ರೀಡಾ ಸಚಿವರು ಶ್ರೀಮತಿ ಮಾರ್ಗರೆಟ್ ಆಳ್ವ ಹಿಂದಿನ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ಸಚಿವರಿಗೆ ಶ್ರೀ ಬಸವನಗೌಡ ಶಾಸಕರು ಇವರ ಪ್ರಸ್ತಾವನೆಯನ್ನು ಪರಿಗಣಿಸಿ ತೀರ್ಥರಾಮೇಶ್ವರದಲ್ಲಿ ಯುವಜನ ವಸತಿ ನಿಲಯವನ್ನು ನಿರ್ಮಾಣ ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದ ಮೇರೆಗೆ ಶ್ರೀಮತಿ ಮಾರ್ಗರೆಟ್ ಆಳ್ವ ಇವರು ತೀರ್ಥ ರಾಮೇಶ್ವರದಲ್ಲಿ ಯುವಜನ ವಸತಿ ನಿಲಯವನ್ನು ನಿರ್ಮಾಣ ಮಾಡಲು ಅನುಮತಿ ನೀಡಲಾಗಿದೆಯೆಂದು ಈ ಬಗ್ಗೆ ಜಮೀನು ಆಯ್ಕೆ ಮಾಡುವಂತೆ ಸೂಚಿಸಿದ್ದರ ಮೇರೆಗೆ ಹಿಂದಿನ ಜಿಲ್ಲಾಧಿಕಾರಿಗಳು ಶಿವಮೊಗ್ಗ ಇವರು ಸದರಿ ಸ್ಥಳವನ್ನು ಸ್ಥಳೀಯ ಶಾಸಕರು ಮತ್ತು ಸಾರ್ವಜನಿಕರೊಂದಿಗೆ ಸಮಾಲೋಚಿಸಿ ಯುವಜನ ವಸತಿ ನಿಲಯವನ್ನು ನಿರ್ಮಾಣ ಮಾಡಲು ಸದರಿ ಸ್ಥಳವನ್ನು ಆಯ್ಕೆ ಮಾಡಿರುತ್ತಾರೆ.

ತರೀಕೆರೆ ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯ ಕಾಮಗಾರಿಗಳು.

590(596)

ಶ್ರೀ ನೀಲಕಂಠಪ್ಪ (ತರೀಕೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ತರೀಕೆರೆ ತಾಲ್ಲೂಕಿನಲ್ಲಿ 1998-99, 99-2000, 2000-01 ಇಲ್ಲಿಯವರೆಗೆ ನಬಾರ್ಡ್ ಯೋಜನೆಯಲ್ಲಿ ತೆಗೆದುಕೊಂಡ ರಸ್ತೆ ಕಾಮಗಾರಿಗಳು ಎಷ್ಟು? ಹಾಗೂ ಎಷ್ಟು ಕಿಮೀಗಳು? ಈ ಕಾಮಗಾರಿಗಳು ಯಾವ ಹಂತದಲ್ಲಿವೆ.

2. ಈ ಕಾಮಗಾರಿ ಕೆಲಸವನ್ನು ಯಾವ ಗುತ್ತಿಗೆದಾರರಿಗೆ ವಹಿಸಲಾಗಿದೆ?

3. ಕಳಪೆ ಕಾಮಗಾರಿ ಮಾಡಿದ ಗುತ್ತಿಗೆದಾರರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ತರೀಕೆರೆ ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯಡಿ 98-99, 99-2000 ಮತ್ತು 2000-2001ರಲ್ಲಿ ಮಂಜೂರಾದ ರಸ್ತೆ ಕಾಮಗಾರಿಗಳು ಕೆಳಕಂಡಂತೆ ಇವೆ.